ಕರ್ನಾಟಕ ವಿಧಾನಸಭೆ

ಸೋಮವಾರ 15ನೇ ಮಾರ್ಚ್ 1999 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10-00 ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದರು.

ಪ್ರಶ್ನೋತ್ತರಗಳು

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅರಣ್ಯೀಕರಣದಲ್ಲಿ ಅವ್ಯವಹಾರಗಳು

245 (680) ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1997-98 ಹಾಗೂ 1998-99ನೇ ಸಾಲಿನಲ್ಲಿ ಅರಣ್ಯ ಇಲಾಖೆಯಿಂದ ಅರಣ್ಯೀಕರಣಕ್ಕೆ ಒದಗಿಸಿರುವ ಹಣವೆಷ್ಟು ಹಾಗೂ ವೆಚ್ಚ ಮಾಡಿದ ಹಣವೆಷ್ಟು?

ಆ) ಅರಣ್ಯೀಕರಣದಲ್ಲಿ ಕೆಲವು ತಾಲ್ಲೂಕಿನಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಡಿ. ಮಂಜುನಾಥ (ಅರಣ್ಯ ಸಚಿವರು) :

ಅ) 1997-98 ಹಾಗೂ 1998-99 ನೇ ಸಾಲಿನಲ್ಲಿ ಅರಣ್ಯ ಇಲಾಖೆಯಿಂದ ಅರಣ್ಯೀಕರಣಕ್ಕೆ ಒದಗಿಸಿರುವ ಮತ್ತು ವೆಚ್ಚ ಮಾಡಿದ ಹಣದ ವಿವರಗಳು ಈ ರೀತಿ ಇವೆ.

ವರ್ಷ	ಒದಗಿಸಿದ ಹಣ (ರೂ. ಲಕ್ಷಗಳಲ್ಲಿ)	ವೆಚ್ಚ ಮಾಡಿದ ಹಣ (ರೂ. ಲಕ್ಷಗಳಲ್ಲಿ)
1997-98	704 1. 342	6535. 793
1998-99	8150.47	6372.753 (ಜನವರಿ 1999ರ ವರೆಗೆ)

ಆ) ಅರಣ್ಯೀಕರಣದಲ್ಲಿ ಕೆಲವು ಅವ್ಯವಹಾರದ ಕುರಿತು ದೂರುಗಳು ಬಂದಿದ್ದು, ಇವು ಪರಿಶೀಲನೆಯ ಹಂತದಲ್ಲಿ ಇವೆ.

ರಾಜ್ಯದಲ್ಲಿ ವನ್ಯ ಮೃಗಗಳ ರಕ್ಷಣೆ

246 (578) ಶ್ರೀ. ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?